ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

**ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು – 560 001**

ಸಂಖ್ಯೆ: ಸಶಿಅ/ಒಒಎಸ್‌ಸಿ/child updation/2015-16 ದಿನಾಂಕ: 27.12.2014

## ಜ್ಞಾಪನ

ವಿಷಯ: 2015-16ನೇ ಸಾಲಿನ ಶಾಲೆಯಿಂದ ಹೊರಗುಳಿದ ಮಕ್ಕಳನ್ನು "ಬಾ ಮರಳಿ ಶಾಲೆಗೆ" ಕಾರ್ಯಕ್ರಮದ ಮೂಲಕ ಶಾಲಾ ವ್ಯಾಪ್ತಿಗೆ ತರಲು ನೋಡಲ್ ಅಧಿಕಾರಿಗಳನ್ನು ನೇಮಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಪರಿಷ್ಕೃತ ಸುತ್ತೋಲೆ ಸಂಖ್ಯೆ : ಸ.ಶಿ.ಅ / ಒ.ಒ.ಎಸ್.ಸಿ /child updation / 2015-16 ದಿನಾಂಕ 03.12.2014.

**********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದನ್ವಯ, ಈಗಾಗಲೇ ತಮಗೆ ತಿಳಿದಿರುವ ಹಾಗೆ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದು, ವಿಚಾರಣೆಯು ಪ್ರಗತಿಯಲ್ಲಿದೆ.

ನವೆಂಬರ್ 2013ರಲ್ಲಿ ನಡೆಸಿದ ಸಮಗ್ರ ಮಕ್ಕಳ ಸಮೀಕ್ಷೆಯಲ್ಲಿ ರಾಜ್ಯಾದ್ಯಂತ 1,68,621 ಮಕ್ಕಳನ್ನು ಗುರುತಿಸಿದ್ದು, ಅದರಲ್ಲಿ ಈಗಾಗಲೇ 1,16,780 ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲಾಗಿದೆ. ಅದರೆ ಪ್ರತಿ ದಿನ ದಿನಪತ್ರಿಕೆಗಳಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿದ್ದಾರೆ, ಇಲಾಖೆಯು ಈ ಕಾರ್ಯದಲ್ಲಿ ವಿಫಲವಾಗಿದೆಯೆಂದು, ಬರುತ್ತಿದ್ದು, ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಡಿಸೆಂಬರ್ 08.12.2014 ರಿಂದ 20.12.2014 ರವರೆಗೆ ಶಾಲೆಗೆ ಸೇರದೆ ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಲು updation survey ನಡೆಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ, ತಾಲ್ಲೂಕು, ಕ್ಲಸ್ಟರ್, ಶಾಲಾ, ಗ್ರಾಮಪಂಚಾಯಿತಿ ಹಾಗೂ ಜನವಸತಿ ಪ್ರದೇಶಗಳಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳ ಬಗ್ಗೆ ಈಗಾಗಲೇ ಉಲ್ಲೇಖದಲ್ಲಿ ನೀಡಿರುವ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು. ಈಗಾಗಲೇ ಡೈಸ್ ಮಾಹಿತಿಯು ಪೂರ್ಣಗೊಂಡಿದ್ದು ಕಳೆದ ಶೈಕ್ಷಣಿಕ ಸಾಲಿನಲ್ಲಿ ದಾಖಲಾಗಿರುವ ಮಕ್ಕಳ ದಾಖಲಾತಿಗೂ, ಈ ಶೈಕ್ಷಣಿಕ ಸಾಲಿನಲ್ಲಿ ದಾಖಲಾಗಿರುವ ಮಕ್ಕಳ ಸಂಖ್ಯೆಗೂ ಇರುವ ವ್ಯತ್ಯಾಸವನ್ನು ಕಂಡುಹಿಡಿದು ಸದರಿ ಸಾಲಿನಲ್ಲಿ ನಡೆಸಲಾದ updation survey ಯಲ್ಲಿ ಗುರುತಿಸಿರುವ ಮಕ್ಕಳನ್ನು ಹೊಂದಾಣಿಕೆ ಮಾಡಿ ಈ ಪ್ರಕ್ರಿಯೆಯಲ್ಲಿ ದ್ವಿದಾಖಲಾತಿ, ಮರಣ, ವಲಸೆ, ನಕಲಿ ದಾಖಲಾತಿ ಇತ್ಯಾದಿ ಕಾರಣಗಳಿಂದ ಇರುವ ಮಕ್ಕಳನ್ನು ಖುದ್ದಾಗಿ ಪರಿಶೀಲಿಸಿ, ದೃಢೀಕರಿಸುವುದು.

ಪು.ತಿ.ನೋ

ದೂರವಾಣಿ : 080 22483040, 22483041 ಫ್ಯಾಕ್ಸ್ : 22126718 www.schooleducation.kar.nic.in/SSA

❖ ಈ ಕಾರ್ಯವನ್ನು ಉತ್ತಮವಾಗಿ ನಡೆಸಿ ಯಶಸ್ವಿಗೊಳಿಸಲು ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ಇವರು ಸಭೆ ಕರೆದು ಶಿಕ್ಷಣ ಅಧಿಕಾರಿಗಳು, ವಿಷಯ ಪರಿವೀಕ್ಷಕರು, ಡಯಟ್‌ನ ಹಿರಿಯ ಮತ್ತು ಕಿರಿಯ ಉಪನ್ಯಾಸಕರು, ಡಿ.ವೈ.ಪಿ.ಸಿ (ಎಸ್.ಎಸ್.ಎ, ಆರ್.ಎಂ.ಎಸ್.ಎ) ಎ.ಪಿ.ಸಿ, ಬಿ.ಇ.ಒ, ಬಿ.ಆರ್.ಸಿಗಳನ್ನು ಒಟ್ಟು ಲಭ್ಯವಿರುವ ಅಧಿಕಾರಿಗಳ ಸಂಖ್ಯೆಗನುಗುಣವಾಗಿ ಜಿಲ್ಲಾವಾರು ಗ್ರಾಮ ಪಂಚಾಯಿತಿಗಳಿಗೆ ಹಂಚಿಕೆ ಮಾಡಿ ದಿನಾಂಕ: 2-1-2015 ರಿಂದ 5-1-2015ರೊಳಗಾಗಿ ಈ ಅಧಿಕಾರಿಗಳು ಕನಿಷ್ಠ ತಪ್ಪದೆ 1 ಅಥವಾ 2 ದಿನಗಳು ಕಡ್ಡಾಯವಾಗಿ ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಣತಿ ಮಾಡಿದ ಅಧಿಕಾರಿಗಳಿಂದ ಮಾಹಿತಿ ಪಡೆದು ರ್‍ಯಾಂಡಮ್ ಆಗಿ ಆ ಪ್ರದೇಶಗಳಿಗೆ ಖುದ್ದಾಗಿ ಭೇಟಿ ನೀಡಿ, ಶಾಲೆಗಳಿಗೆ ಹಾಗೂ ಜನವಸತಿ ಪ್ರದೇಶಗಳ ಮನಗಳಿಗೆ ಭೇಟಿ ನೀಡಿ ಸ್ವಯಂ ಪರಿಶೀಲಿಸಿ ಯಾವುದೇ ಪ್ರದೇಶವು ಗಣತಿಯಿಂದ ಕೈಬಿಡದಂತೆ ಹಾಗೂ ಶಾಲೆಗೆ ಹೋಗುತ್ತಿರುವ ಹಾಗೂ ಬಿಟ್ಟಿರುವ ಮಕ್ಕಳ ಮಾಹಿತಿಯನ್ನು ಪಡೆಯಲಾಗಿದೆಯೆಂದು ತಮಗೆ ನೀಡಿದ ಪ್ರದೇಶದ ವಿವರವನ್ನು ಹಾಗೂ ಗಣತಿದಾರರು ನಿರ್ವಹಿಸಿದ ಕಾರ್ಯ ವೈಖರಿ ವಿವರವನ್ನು ಜಿಲ್ಲಾ ಹಂತದ ಅಧಿಕಾರಿಗಳಲ್ಲದೆ ಆಯುಕ್ತರ ಕಛೇರಿಯಿಂದ ಆದೇಶ ನೀಡಿರುವ ಜಿಲ್ಲಾ ನೋಡಲ್ ಅಧಿಕಾರಿಗಳು ಕಡ್ಡಾಯವಾಗಿ ಈ ಮೇಲಿನಂತೆ ಕ್ರಮವಹಿಸುವುದಲ್ಲದೇ ಪ್ರತಿಯೊಂದು ಸ್ಥಳದಲ್ಲಿಯೂ ಖುದ್ದು ಪರಿಶೀಲಿಸಿ ಗಣತಿ ಮಾಡಲಾಗಿದೆಯೆಂದು ದೃಢೀಕರಣದೊಂದಿಗೆ ವಿವರವಾದ ಮಾಹಿತಿಯನ್ನು ನಿರ್ದೇಶಕರು (ಕಾರ್ಯಕ್ರಮಗಳು) ಸರ್ವ ಶಿಕ್ಷಣ ಅಭಿಯಾನ ಇವರಿಗೆ ದಿನಾಂಕ 07.01.2015ರೊಳಗೆ ಸಲ್ಲಿಸಲು ತಿಳಿಸಿದೆ. ( ಅನುಬಂಧ 1ರಲ್ಲಿ ನೀಡಿರುವ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಸಲ್ಲಿಸುವುದು).

❖ ಶಾಲೆಯಿಂದ ಹೊರಗುಳಿದ ಮಕ್ಕಳು ಕಂಡು ಬರುವ ಪ್ರದೇಶಗಳಲ್ಲಿ ಎಚ್ಚರಿಕೆಯಿಂದ ನಿಖರತೆಯನ್ನು ಸಾಧಿಸುವ ನಿಟ್ಟಿನಲ್ಲಿ ಎಲ್ಲಾ ಸ್ತರದ ಅಧಿಕಾರಿಗಳು ಸಕ್ರಿಯವಾಗಿ ಪಾಲ್ಗೊಂಡು ಮಾಹಿತಿಯನ್ನು ಸಂಗ್ರಹಿಸಲು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ
ಹೆಚ್ಚುವರಿ ರಾಜ್ಯ ಯೋಜನಾ ನಿರ್ದೇಶಕರು,
ಸರ್ವ ಶಿಕ್ಷಣ ಅಭಿಯಾನ,
ಬೆಂಗಳೂರು

**ಸೂಕ್ತ ಕ್ರಮಕ್ಕಾಗಿ:-**

1) ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಅಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ ಕ್ರಮಕ್ಕಾಗಿ.
2) ವಿವಿಧ ಜಿಲ್ಲೆಗಳಿಗೆ ರಾಜ್ಯ ಕಛೇರಿಯಿಂದ ನೇಮಕಗೊಂಡಿರುವ ನೋಡಲ್ ಅಧಿಕಾರಿಗಳಿಗೆ ಕ್ರಮಕ್ಕಾಗಿ
3) ಮಾನ್ಯ ಆಯುಕ್ತರ ಆಪ್ತ ಶಾಖೆಗೆ ಮಾಹಿತಿಗಾಗಿ
4) ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ
5) ನಿರ್ದೇಶಕರು(ಕಾರ್ಯಕ್ರಮ), ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಕ್ರಮಕ್ಕಾಗಿ
6) ಕಛೇರಿ ಪ್ರತಿ

## ಅನುಬಂಧ 01

ಜಿಲ್ಲೆಯ ಹೆಸರು

| ಕ್ರಮ ಸಂಖ್ಯೆ | ಅಧಿಕಾರಿಯ ಹೆಸರು / ಪದನಾಮ | ಅಧಿಕಾರಿಯ ವಿಳಾಸ / ದೂರವಾಣಿ ಸಂಖ್ಯೆ | ಹಂಚಿಕೆ ಮಾಡಿದ ಗ್ರಾಮ ಪಂಚಾಯಿತಿಗಳು ಹೆಸರು / ವಿಳಾಸ | ಭೇಟಿ ನೀಡಿದ ಗ್ರಾಮ ಪಂಚಾಯಿತಿಗಳು ಹೆಸರು / ವಿಳಾಸ | ಭೇಟಿ ನೀಡಿದ ದಿನಾಂಕಗಳು | ಕಂಡು ಬಂದ ವ್ಯತ್ಯಾಸಗಳು (ಪ್ರತ್ಯೇಕ ಹಾಳೆಯನ್ನು ಬಳಸುವುದು) | ಗಣತಿದಾರರು ಗುರುತಿಸಿದ ಮಕ್ಕಳ ಸಂಖ್ಯೆ | | | | | | ನೋಡಲ್ ಅಧಿಕಾರಿಗಳು ಗುರುತಿಸಿದ ಮಕ್ಕಳ ಸಂಖ್ಯೆ | | | | | | ವ್ಯತ್ಯಾಸಕ್ಕೆ ಕಾರಣಗಳು | ವ್ಯತ್ಯಾಸಗಳನ್ನು ಸರಿಪಡಿಸಲು ತೆಗೆದುಕೊಂಡ ಕ್ರಮಗಳು (ಪ್ರತ್ಯೇಕ ಹಾಳೆಯನ್ನು ಬಳಸುವುದು) | ಗ್ರಾಮ ಪಂಚಾಯತಿಯಲ್ಲಿ ಗುರುತಿಸಿದ ಒಟ್ಟು ಮಕ್ಕಳ ಸಂಖ್ಯೆ | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | ಶಾಲೆಗೆ ಸೇರದವರು | | | ಶಾಲೆಗೆ ಸೇರಿ ಬಿಟ್ಟವರು | | | ಶಾಲೆಗೆ ಸೇರದವರು | | | ಶಾಲೆಗೆ ಸೇರಿ ಬಿಟ್ಟವರು | | | | | ಶಾಲೆಗೆ ಸೇರದವರು | | ಶಾಲೆಗೆ ಸೇರಿ ಬಿಟ್ಟವರು | |
| | | | | | | | ಗಂ | ಹೆ | ಒಟ್ಟು | ಗಂ | ಹೆ | ಒಟ್ಟು | ಗಂ | ಹೆ | ಒಟ್ಟು | ಗಂ | ಹೆ | ಒಟ್ಟು | | | ಗಂ | ಹೆ | ಗಂ | ಹೆ |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |

ಈ ಮಾಹಿತಿಯು ಎಲ್ಲಾ ಸರಿಯಾಗಿದ್ದು, ಯಾವುದೇ ಪ್ರದೇಶವನ್ನು ಕೈ ಬಿಡದಂತೆ ಗಣತಿ ಮಾಡಲಾಗಿದೆಯೆಂದು ದೃಢೀಕರಿಸಿದೆ.

ಜಿಲ್ಲಾ ನೋಡಲ್ ಅಧಿಕಾರಿಗಳು
ಸಾರ್ವಜನಿಕ ಶಿಕ್ಷಣ ಇಲಾಖೆ

ಉಪನಿರ್ದೇಶಕರು (ಅಭಿವೃದ್ಧಿ)
ಸಾರ್ವಜನಿಕ ಶಿಕ್ಷಣ ಇಲಾಖೆ

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ